ಶ್ರೀ ಬಿ. ಎ. ಜೀವಿಜಯ.—ಮಾನ್ಯ ಸದಸ್ಯರಾದ ಆಚಾರ್ಯರವರು ಉಡುಪಿಯಲ್ಲಿ ಜಾಗ ಕೊಡಿಸಂವುದಾದರೆ ಸರ್ಕಾರೀ ಕಟ್ಟಿಗೆ ಡಿಪೋ ತೆರೆಯಲಿಕ್ಕೆ ಸರ್ಕಾರ ಸಿದ್ಧವಾಗಿದೆ. ಕಟ್ಟಿಗೆ ಡಿಪೋ ತೆರೆಯಲಿಕ್ಕೆ ನಿನ್ನೆಯವರೆವಿಗೂ ಜಾಗವನ್ನು ಹುಡುಕಿದ್ದೇವೆ ಸ್ಥಳ ಸಿಕ್ಕಿಲ್ಲ. ಮಾನ್ಯ ಸದಸ್ಯರು ಎಷ್ಟು ಬೇಗ ಸ್ಥಳವನ್ನು ಕೊಡಿಸಲಿಕ್ಕೆ ಸಹಾಯ ಮಾಡುತ್ತಾರೋ ಅಷ್ಟು ಬೇಗ ಸೌದೆ ಡಿಪೋ ಓಪನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವಿ. ಎಸ್. ಆಚಾರ್ಯ.—ನಾವು ನಮ್ಮ ಜಿಲ್ಲೆಯಲ್ಲಿ 'ಹಿಂದೂ ಶವಸಂಸ್ಕಾರ ಸಮಿತಿ' ಎಂದು ಮಾಡಿಕೊಂಡು ಸಮಿತಿಯನ್ನು ನಡೆಸುತ್ತಿದ್ದೇವೆ. ನಮಗೆ ಸೌದೆ ಸಿಗುತ್ತಿಲ್ಲ. ಸೌದೆ ಬೆಲೆ ಮೂರಂ ಭಾರಿ ಏರಿಸಲಾಗಿದೆ. ೫೫ರೂಪಾಯಿ ಇದ್ದದ್ದು ಈಗ ೭೫ ರೂಪಾಯಿ ಆಗಿದೆ. ಏರಿರುವ ಬೆಲೆಯನ್ನು ಇಳಿಸಿ ಶವಸಂಸ್ಕಾರಕ್ಕಾದರೂ ಕಡಿಮೆ ದರದಲ್ಲಿ ಸೌದೆ ಒದಗಿಸುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಕೆ. ಎಚ್. ರಂಗನಾಥ್.—ಸೌದೆ ಸಿಗುವುದು ಕಷ್ಟವಿರುವುದರಿಂದ ಸರ್ಕಾರ 'ಕ್ರೆಮಟೋರಿಯಂ' ವ್ಯವಸ್ಥೆ ಮಾಡುತ್ತದೆಯೇ? ಮಾನ್ಯ ಸದಸ್ಯರಾದ ಆಚಾರ್ಯರವರು ಹೆಣ ಸುಡುವುದಕ್ಕೂ ಸೌದೆ ಸಿಗುವುದಿಲ್ಲ ಬಹಳ ಕಷ್ಟವಾಗುತ್ತಿದೆ ಎಂದು ಹೇಳುತ್ತಿದ್ದಾರೆ. ದೊಡ್ಡ ದೊಡ್ಡ ಊರುಗಳಲ್ಲಿ ಇನ್ನೂ ಕಷ್ಟ. ಬೆಂಗಳೂರಿನ ಹರಿಶ್ಚಂದ್ರ ಘಾಟ್‌ನಲ್ಲಿ ಪಕ್ಕ ಪಕ್ಕದಲ್ಲೇ ಹೆಣಗಳನ್ನು ಹೂಳಬೇಕಾಗುತ್ತದೆ. ಎಲಾಬು ಹಾಗೆಯೇ ಇರುತ್ತದೆ ಆ ಒಂದು ಪರಿಸ್ಥಿತಿ ಇದೆ. ವಿದ್ಯುಚ್ಛಕ್ತಿ ವ್ಯವಸ್ಥೆ ಮಾಡಿ ಶವಸಂಸ್ಕಾರ ಮಾಡಲು ಸರ್ಕಾರ ವ್ಯವಸ್ಥೆ ಮಾಡುವ ಯೋಚನೆ ಮಾಡುತ್ತದೆಯೇ? ಮಾನ್ಯ ಆಚಾರ್ಯರವರು 'ಹಿಂದೂ ಶವ ಸಂಸ್ಕಾರ ಸಮಿತಿ' ಅಂತ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಏನು ಮಾಡುತ್ತೀರಿ?

ಶ್ರೀ ವಿ. ಎಸ್. ಆಚಾರ್ಯ. ವಿದ್ಯುತ್ ಚಿತಾಗಾರ ವ್ಯವಸ್ಥೆ ಮಾಡಿಕೊಂಡರೆ ಈಗಲೇ ಪವರ್ ಕಟ್ ಇರುವುದರಿಂದ ಗಂಟಾನುಗಟ್ಟಲೆ ಶವ ಇಟ್ಟುಕೊಂಡು ಕಾಯಬೇಕಾಗುತ್ತದೆ. ಆದರಿಂದ ಇನ್ನೂ ಬಹಳ ಕಷ್ಟವಾಗುತ್ತದೆ.

ಶ್ರೀ ಬಿ. ಎ. ಜೀವಿಜಯ.—ಅದರ ಬಗ್ಗೆ ಈಗ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಪ್ರತಾಪಚಂದ್ರಶೆಟ್ಟಿ.—ಉಪಾಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಉಪಾಧ್ಯಕ್ಷರು.—ತಾವು ಜಾಗ ಕೊಟ್ಟರೆ ಸೌದೆ ಡಿಪೋ ತೆಗೆಯುತ್ತಾರೆ.

ಶ್ರೀ ಬಿ. ಎ. ಜೀವಿಜಯ.—ಹಳ್ಳಿಗಳಲ್ಲೆಲ್ಲಾ ಸರ್ಕಾರೀ ಸೌದೇ ಡಿಪೋಗಳನ್ನು ಓಪನ್ ಮಾಡುತ್ತೇವೆಂದು ಹೇಳಿಲ್ಲ, ಸಹಕಾರ ಸಂಘಗಳು ಪಂಚಾಯಿತಿಗಳು ಮುಂದೆ ಬಂದು ಲಾಭ ನಷ್ಟ ಇಲ್ಲದೇ ಡಿಪೋ ನಡೆಸುವುದಕ್ಕೆ ಸಾಧ್ಯತೆ ಇದ್ದರೆ ಅಂತಹವರು ಮುಂದೆ ಬಂದರೆ ನಾವು ಸರ್ಕಾರೀ ಡಿಪೋ ಓಪನ್ ಮಾಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಪ್ರತಾಪಚಂದ್ರಶೆಟ್ಟಿ,—ಯಾರೂ ಮುಂದೆ ಬಾರದೇ ಇದ್ದ ಪಕ್ಷದಲ್ಲಿ ನೀವು ಏನು ಮಾಡುತ್ತೀರಿ?.

ಉಪಾಧ್ಯಕ್ಷರು.—ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಕೆ. ಆರ್. ಪೇಟೆಯಲ್ಲಿ ಹೇಮಾವತಿ ವಿಭಾಗದ ಆಡಳಿತ ಕಛೇರಿ ಕಟ್ಟಡದ ಮೇಲ್ಛಾವಣಿ ಕುಸಿತ.

೧೯೯. ಶ್ರೀ ಎಂ. ಪುಟ್ಟಸ್ವಾಮಿ (ಕೃಷ್ಣರಾಜಪೇಟೆ).—ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ .

(ಅ) ಕೃಷ್ಣರಾಜಪೇಟೆ ತಾಲ್ಲೂಕಿಗೆ ಹೇಮಾವತಿ ವಿಭಾಗದ ಆಡಳಿತ ಕಛೇರಿಯ ಕಟ್ಟಡದ ಮೇಲ್ಛಾವಣಿ ಕುಸಿದು ಬಿದ್ದು ಹೋಗಿದೆ ಎಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೆ?

(ಆ) ಹಾಗಿದ್ದಲ್ಲಿ ಕುಸಿದು ಬೀಳಲು ಕಾರಣಗಳೇನು?

(ಇ) ತಾಂತ್ರಿಕ ತಜ್ಞರ ಕಣ್ಣಿದುರಿನಲ್ಲಿಯೇ ಇಂಥ ಘಟನೆ ನಡೆದಿದೆಯಾದ ಮೇಲೆ ಆ ವಿಭಾಗದಲ್ಲಿ ನಡೆಯುತ್ತಿರುವ ಬಾರಿ ಕಾಮಗಾರಿಗಳ ಹಿತದೃಷ್ಟಿ ಯಿಂದ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿಗಳು)

(ಅ) ಇಲ್ಲ. ಕುಸಿದು ಬಿದ್ದಿರುವುದು ಆಡಳಿತ ಕಛೇರಿಯ ಪಕ್ಕದಲ್ಲಿ ಕಟ್ಟುತ್ತಿರುವ ''ಬ್ರಹ್ಮಚಾರಿ ವಸತಿ'' ಗೃಹದ ವರಾಂಡದ ಮೇಲುಚಾವಣಿಯ ಒಂದು ಭಾಗ ಮಾತ್ರ.

(ಆ) ಆಕಸ್ಮಿಕ.

(ಇ) ಆಕಸ್ಮಿಕ ಘಟನೆಯಾದುದರಿಂದ, ಮಾನ್ಯ ಸದಸ್ಯರ ಸಂಶಯಕ್ಕೆ ಕಾರಣವಿಲ್ಲ.

ಶ್ರೀ ಎಂ ಪುಟ್ಟಸ್ವಾಮಿಗೌಡ (ಕೃಷ್ಣರಾಜಪೇಟೆ).—ಆಡಳಿತ ಕಛೇರಿಯ ಕಟ್ಟಡದ ಮೇಲ್ಚಾವಣಿ ಕುಸಿದು ಬಿದ್ದಿದೆ. ಲೋಕೋಪಯೋಗಿ ಇಲಾಖೆಯಲ್ಲಿ ಇದನ್ನೂ ಆಕಸ್ಮಿಕವಾಗಿ ಬಿದ್ದುಹೋಗಿದೆ ಎಂದು ಹೇಳುವುದರಲ್ಲಿ ಅರ್ಥವಿದೆಯೇ ? ಮೇಲ್ಚಾವಣಿ ಕುಸಿದು ಬೆಳಲಿಕ್ಕೆ ಸೆಂಟರಿಂಗ್ ತೊಂದರೆಯೇ ? ಅದು ಯಾವರೀತಿ ಕುಸಿಯಿತು ; ಕುಸಿಯಲಿಕ್ಕೆ ಸಿಮೆಂಟಿನ ಗುಣಮಟ್ಟ ಕಡಿಮೆಯಾಗಿರುವುದು ಕಾರಣವೇ ? ಅಥವಾ ಕಬ್ಬಿಣದ ತೊಂದರೆಯಿಂದ ಆಗಿದೆಯೇ ? ಸ್ಥಳದಲ್ಲಿ ಮೇಲ್ವಿಚಾರಣೆ ಮಾಡ ತಕ್ಕಂತಹ ಸಿಬ್ಬಂದಿ ಏನು ಇದ್ದಾರೆ ಅವರಿಗೆ ಮೇಲಿನ ಉನ್ನತದರ್ಜೆಯ ವ್ಯಕ್ತಿಗಳ ರಕ್ಷಣೆ ಇದೆಯೇ ! ಅಥವಾ ಅಲ್ಲಿರುವ ಅಧಿಕಾರಿಗಳ ಉದಾಸೀನ ಮತ್ತು ಅಸಡ್ಡೆ ಪ್ರವೃತ್ತಿಯಿಂದ ಈ ರೀತಿ ಆಗಿದೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಕುಸಿದು ಬಿದ್ದಿರುವುದು ಆಡಳಿತಕ್ಕೆ ಸಂಬಂಧಪಟ್ಟ ಕಟ್ಟಡ ಅಲ್ಲವೆಂದು ಹೇಳಿದ್ದೇನೆ. 'ಬ್ರಹ್ಮಚಾರಿ ವಸತಿ' ಗೃಹದ ವರಾಂಡದ ಮೇಲುಚಾವಣಿಯ ಒಂದು ಭಾಗ ಮಾತ್ರ ಕುಸಿದು ಬಿದ್ದಿದೆ. ಕುಸಿದು ಬಿದ್ದಿರುವುದಕ್ಕೆ ಕಾರಣ ಚಾವಣಿ ಹಾಕಲಿಕ್ಕೆ ಸಾರ್ವೆ ಕಟ್ಟಿದ್ದರು. ದನಗಳು ಮೈ ಉಜ್ಜಿಕೊಳ್ಳುವಾಗ ಸಡಿಲವಾಗಿ ಚಾವಣಿ ಬೀಳಲಿಕ್ಕೆ ಕಾರಣವಾಯಿತು ಎನ್ನುವ ವರದಿ ಬಂದಿದೆ. ಅದನ್ನೂ ತಪಾಸಣೆ ಮಾಡಿ ಒಂದು ವೇಳೆ ತಾವು ಹೇಳತಕ್ಕ ವಿಷಯಗಳು ಇದ್ದರೆ ಅದನ್ನು ಗಮನದಲ್ಲಿಟ್ಟು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಎಂ. ಪುಟ್ಟಸ್ವಾಮಿಗೌಡ.—ಅಲ್ಲಿಯೇ ೯೦ ಲಕ್ಷ ರೂಪಾಯಿ ಅಂದಾಜಿನ ಅಕ್ವಡಕ್ಟ್ ಕೆಲಸವಾಗುತ್ತಿದೆ. ಅದರ ಮೇಲ್ವಿಚಾರಣೆಯನ್ನು ಕಾಮಗಾರಿ ಇಲಾಖೆಯವರೇ ನಡೆಸಂತ್ತಾರೆ. ಅದು ಸರಿಯಾಗಿ ನಡೆಯುತ್ತಿಲ್ಲ. ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲವೆಂದು ವಿಜಿಲೆನ್ಸ್‌ಗೆ ದೂರು ಹೋಗಿದೆ. ಸಂಬಂಧಪಟ್ಟ ಮಂತ್ರಿಗಳಿಗೆ ದೂರು ಬಂದರೆ ಅದು ಆಕಸ್ಮಿಕ ಎನ್ನುವ ಪದ ಬಳಸಿರುವುದು ಸರಿಯಲ್ಲ. ತಾಂತ್ರಿಕದೋಷಗಳಿಂದ ಕಟ್ಟಡ ಕುಸಿದಿದೆ ಮುಂದೆ ಆಗತಕ್ಕ ಕೆಲಸಕಾರ್ಯಗಳಿಗೆ ಮಂತ್ರಿಗಳು ಹೆಚ್ಚಿನ ಗಮನ ಕೊಡಬೇಕು. ಜನರಲ್ಲಿರುವ ಕಳವಳವನ್ನು ಗಮನಿಸಿ ಈ ಪ್ರಶ್ನೆಯನ್ನು ಹಾಕಿತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಕೆಲಸ ಚಿಕ್ಕದು ದೊಡ್ಡದು ಅನ್ನುವುದಕ್ಕೆ ಬದಲಾಗಿ, ತಾಂತ್ರಿಕ ದೋಷವಿದ್ದರೆ ವಿಚಾರಣೆ ಮಾಡುವುದು ಸರ್ಕಾರದ ಜವಾಬ್ದಾರಿ ಇದೆ. ವಿಜಿಲೆನ್ಸ್‌ನವರ ಎನ್‌ಕ್ವೈರಿ ಆಗಂತ್ತದೆ. ವಿಜಿಲೆನ್ಸ್‌ನವರು ಹಲವಾರು ವಿಷಯಗಳ ಮೇಲೆ ನೇರವಾಗಿ ವಿಚಾರಣೆ ಮಾಡಬಹುದು. ಈ ವಿಚಾರದಲ್ಲಿ ತಾಂತ್ರಿಕದೋಷ ಆ ಒಂದು ಹಿನ್ನಲೆಯಲ್ಲಿ ಕೆಲಸ ಆಗಿದ್ದರೆ ಆದರ ಬಗ್ಗೆ ವಿಚಾರ ಮಾಡುತ್ತೇನೆ. ನನಗೆ ಬಂದಿರುವ ವರದಿ ಸಾರ್ವೆ ಕಟ್ಟಿದ್ದನ್ನು ದನಗಳು ನೂಕಿಕೊಂಡು ಹೋದಾಗ ಈ ರೀತಿಯಾಗಿದೆ ಎಂದು ವರದಿ ಬಂದಿದೆ. ಆದರ ಬಗ್ಗೆ ವಿವರ ತರಿಸಿ ನಾನು ನೋಡುತ್ತೇನೆ.

ವಿಷಯ :—ಹೊನ್ನಾಳಿ ತಾಲ್ಲೂಕಿನಲ್ಲಿ ಹೊಳೆಸಿರಳಹಳ್ಳಿ, ದಿಡಗೂರು, ನೇವರ ಹೊನ್ನಾಳಿ, ಬಳ್ಳಾಪುರ ಮತ್ತು ಹರಳಿಹಳ್ಳಿ ಗ್ರಾಮಗಳಿಗೆ ತುಂಗಾಭದ್ರಾ ನದಿಯಿಂದ ಪಿತ ನೀರಾವರಿ ಯೋಜನೆಗಳನ್ನು ನಿರ್ಮಿಸುವ ಬಗ್ಗೆ.